# ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

# VISVESVARAYA JALA NIGAM LIMITED

(A Government of Karnataka Enterprise)

ಸಂಖ್ಯೆ: ವಿಜನಿನಿ/ಸಮಿತಿ ರಚನೆ/2017/023 ದಿ: 24/12/2016

## ಅಧಿಕೃತ ಜ್ಞಾಪನ

**ವಿಷಯ:** **ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿ (Technical Sub Committee - TSC) ರಚಿಸುವ ಬಗ್ಗೆ.**

**ಉಲ್ಲೇಖ:**

1) **ಸರ್ಕಾರದ ಆದೇಶ ಸಂ: ಜಸಂಇ 35 ವಿಬ್ಯಾಇ 2016, ಬೆಂಗಳೂರು ದಿನಾಂಕ 20/8/2016.**
2) **ಸರ್ಕಾರದ ಆದೇಶ ಸಂ: ಜಸಇ 253 ಕೆಬಿಎನ್ 2013, ಬೆಂಗಳೂರು ದಿನಾಂಕ 28/10/2013.**
3) **ದಿನಾಂಕ 10/11/2016 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 1ನೇ ಸಭೆಯ ನಡಾವಳಿ.**

~ ~ ~

ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿಸಿದ ಮತ್ತು ಉದ್ದೇಶಿತ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಬರಪೀಡಿತ ಪ್ರದೇಶಗಳಿಗೆ ಉಪಯುಕ್ತವಾಗುವಂತಹ / ಪೂರಕವಾಗಿರುವಂತಹ ಮತ್ತು ಚಾಲ್ತಿಯಲ್ಲಿರುವಂತಹ ಇತರೆ ಯೋಜನಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮತ್ತು ನಿರ್ವಹಣೆಗಾಗಿ ವಿಶ್ವೇಶ್ವರಯ್ಯ ಜಲ ನಿಗಮವನ್ನು ಸ್ಥಾಪಿಸಲಾಗಿದೆ.

ನಿಗಮಗಳಿಗೆ ವಹಿಸಿರುವ ಯೋಜನಾ ಕಾಮಗಾರಿಗಳನ್ನು ಯೋಜನೆಯ ಪರಿಕಲ್ಪನೆಯಿಂದ ಅನುಷ್ಠಾನ ಹಂತದವರೆವಿಗೂ ಕಾರ್ಯಪ್ರಕ್ರಿಯೆಗಳನ್ನು ಸರಳವಾಗಿ ಮತ್ತು ತ್ವರಿತಗೊಳಿಸಲು ಅನುವಾಗುವಂತೆ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ನು ಟೆಂಡರ್ ಪ್ರಕ್ರಿಯೆಗಳಲ್ಲಿ ಅಳವಡಿಸಿಕೊಂಡು ಏಕರೂಪ ಪದ್ಧತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುವು ಮಾಡಿಕೊಡುವ ಸಲುವಾಗಿ ತಾಂತ್ರಿಕ ಉಪ ಸಮಿತಿ (Technical Sub Committee - TSC), ಅಂದಾಜು ಪರಿಶೀಲನಾ ಸಮಿತಿ (Estimate Review Committee-ERC) ಹಾಗೂ ಟೆಂಡರ್ ಪರಿಶೀಲನಾ ಸಮಿತಿಗಳನ್ನು (Tender Scrutiny Committee-TSC) ನಿಗಮಗಳ ವಿವಿಧ ಅಧಿಕಾರಿಗಳ ಮಟ್ಟದಲ್ಲಿ ರಚಿಸಲು ಸರ್ಕಾರ ಉಲ್ಲೇಖ(2)ರ ಆದೇಶದಲ್ಲಿ ನಿರ್ದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ವಿಶ್ವೇಶ್ವರಯ್ಯ ಜಲ ನಿಗಮದ ಅಡಿಯಲ್ಲೂ ಸಹ ಸದರಿ ನಿಗಮದ ವ್ಯಾಪ್ತಿಯಲ್ಲಿನ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಗಾಗಿ ತಾಂತ್ರಿಕ ಮಾರ್ಗದರ್ಶನ, ಸಲಹೆ ಸೂಚನೆಗಳು, ಪ್ರಸ್ತಾವನೆಗಳ ಪರಿಶೀಲನೆ, ಅವುಗಳ ಅವಶ್ಯಕ ತೀರುವಳಿ ಮತ್ತು ಅನುಮೋದನೆಗಳಿಗಾಗಿ ಈ ನಿಗಮದ ಕಾರ್ಯವ್ಯಾಪ್ತಿಯ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಅನುಸಾರ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯನ್ನು ರಚಿಸುವ ಅವಶ್ಯಕತೆ ಇದ್ದು, ಪ್ರಸ್ತಾಪಿತ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ನಾಮ ನಿರ್ದೇಶನಗಳನ್ನು ಒಳಗೊಂಡ ಸಮಿತಿ ರಚನೆಯ ಪ್ರಸ್ತಾವನೆಗೆ ಉಲ್ಲೇಖ (3)ರ ಮೂಲಕ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 1ನೇ ನಿರ್ದೇಶಕರ ಮಂಡಳಿಯು ಅನುಮೋದಿಸಿದ್ದು, ಅದನ್ನು ದಿನಾಂಕ 1-1-2017ರಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ಆದೇಶಿಸಲಾಗಿದೆ.

C/o : Karnataka Neeravari Nigam Limited, No.1, Coffeeboard Building, 4th Floor, Dr. B.R. Ambedkar Veedhi, B'lore - 1
Ph: 080-2283074-78 Fax: 080-2836015 Email : mail@vjnl.in Website : www.vjnl.in
CIN : U41000KA2016SGC097260

## ~: ಆದೇಶ :~

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಈ ಯೋಜನೆಗಳಿಗೆ ಸಂಬಂಧಿಸಿದ ಇತರೆ ಯೋಜನಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಮತ್ತು ನಿರ್ವಹಣೆಗಾಗಿ ಸ್ಥಾಪಿಸಲಾಗಿರುವ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ವ್ಯಾಪ್ತಿಯಲ್ಲಿನ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಗಾಗಿ ತಾಂತ್ರಿಕ ಮಾರ್ಗದರ್ಶನ, ಸಲಹೆ ಸೂಚನೆಗಳು, ಪ್ರಸ್ತಾವನೆಗಳ ಪರಿಶೀಲನೆ, ಅವುಗಳ ಅವಶ್ಯಕ ತೀರುವಳಿ ಮತ್ತು ಅನುಮೋದನೆಗಳಿಗಾಗಿ ಸರ್ಕಾರದ ಆದೇಶ ಸಂ: ಜಸಇ 253 ಕೆಬಿಎನ್ 2013, ಬೆಂಗಳೂರು ದಿನಾಂಕ 28/10/2013 ರಲ್ಲಿನ ಮಾರ್ಗದರ್ಶಿ ಸೂತ್ರಗಳ ಅನುಸಾರ ಕಾರ್ಯನಿರ್ವಹಿಸಲು ದಿನಾಂಕ 10/11/2016 ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 1ನೇ ಸಭೆಯ ಅನುಮೋದನೆಯಂತೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ತಾಂತ್ರಿಕ ಉಪ ಸಮಿತಿಯನ್ನು ದಿನಾಂಕ 1-1-2017ರಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ರಚಿಸಿ, ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಡಿ.ಎನ್. ದೇಸಾಯಿ, ನಿವೃತ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ | ಅಧ್ಯಕ್ಷರು |
| 2 | ವ್ಯವಸ್ಥಾಪಕ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |
| 3 | ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| 4 | ಶ್ರೀ ಜೆ.ಆರ್.ಕೆ. ಕರಡಿ, ನಿವೃತ್ತ ಪ್ರಧಾನ ಇಂಜಿನಿಯರ್ | ಸದಸ್ಯರು |
| 5 | ಶ್ರೀ ಆರ್. ಬಸವನಗೌಡ, ಮುಖ್ಯ ಇಂಜಿನಿಯರ್ (ನಿವೃತ್ತ) | ಸದಸ್ಯರು |
| 6 | ಪ್ರೊ. ವಿ.ಪಿ. ಹುಗ್ಗಿ, ಪ್ರಾಂಶುಪಾಲರು, ಹಳಕಟ್ಟಿ ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ, ವಿಜಯಪುರ | ಸದಸ್ಯರು |

ಸದರಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 1ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದಿಸಿದಂತೆ ಉಪಸ್ಥಿತಿ ಭತ್ಯೆ, ಪ್ರಯಾಣ ಭತ್ಯೆ ಮತ್ತು ಕಾಮಗಾರಿ ಪರಿವೀಕ್ಷಣಾ ಭತ್ಯೆಗಳ ಸೌಲಭ್ಯಗಳನ್ನು ನಿಯಮಾನುಸಾರ ನೀಡಲಾಗುವುದು.

**ನಿರ್ದೇಶಕರ ಮಂಡಳಿಯ ಆದೇಶದಂತೆ,**
**ಸಹಿ/-**
**(ಆರ್. ರುದ್ರಯ್ಯ)**
**ವಿಶೇಷಾಧಿಕಾರಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ,**
**ಮತ್ತು ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ನೀರಾವರಿ ನಿಗಮ ನಿಯಮಿತ**

ಗೆ,

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.
3. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.
4. ಶ್ರೀ. ಡಿ.ಎನ್. ದೇಸಾಯಿ, ಅಧ್ಯಕ್ಷರು, ತಾಂತ್ರಿಕ ಉಪ ಸಮಿತಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಆದ್ಯ ಮಾಹಿತಿಗಾಗಿ.

5. ಶ್ರೀ ಜೆ.ಆರ್.ಕೆ. ಕರಡಿ / ಶ್ರೀ ಆರ್. ಬಸವನಗೌಡ / ಪ್ರೋ. ವಿ.ಪಿ. ಹುಗ್ಗಿ ಸದಸ್ಯರು, ತಾಂತ್ರಿಕ ಉಪ ಸಮಿತಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಇವರ ಆದ್ಯ ಮಾಹಿತಿಗಾಗಿ.
6. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಎಲ್ಲಾ ಮುಖ್ಯ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್ ಮತ್ತು ಕಾರ್ಯಪಾಲಕ ಇಂಜಿನಿಯರ್‌ಗಳಿಗೆ ಮಾಹಿತಿಗಾಗಿ.
7. ಕಂಪನಿ ಕಾರ್ಯದರ್ಶಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ / ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಮಾಹಿತಿಗಾಗಿ.
8. ಪ್ರಧಾನ ವ್ಯವಸ್ಥಾಪಕರು (ಹಣಕಾಸು), ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ / ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಮಾಹಿತಿಗಾಗಿ.
9. ಮುಖ್ಯ ಆಡಳಿತಾಧಿಕಾರಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಚಿತ್ರದುರ್ಗ / ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ ಇವರ ಮಾಹಿತಿಗಾಗಿ.
10. ಮುಖ್ಯ ಲೆಕ್ಕಾಧಿಕಾರಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಚಿತ್ರದುರ್ಗ / ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ ಇವರ ಮಾಹಿತಿಗಾಗಿ.

(ಆರ್. ರುದ್ರಯ್ಯ)
**ವಿಶೇಷಾಧಿಕಾರಿ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ,**
**ಮತ್ತು ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ನೀರಾವರಿ ನಿಗಮ ನಿಯಮಿತ**

24/12 24/12